ಶ್ರೀ ಕೆ. ಲಕ್ಕಪ್ಪ.—ಇದಕ್ಕಿಂತ ಮುನ್ನ ಸ್ಪೆಷಲ್ ನಬ್ ಡಿವಿಷನ್ ಇರಲಿಲ್ಲ. ಇರತಕ್ಕಂಥ ರೆಗ್ಯುಲರ್ ಡಿವಿಷನ್‌ನಲ್ಲೇ ಕೆಲಸ ಮಾಡಬೇಕಾಗಿತ್ತು. ಆದುದರಿಂದ ಇದರ ಬಗ್ಗೆ ಏನು ವರದಿ ತಯಾರು ಮಾಡಿ ಕಳುಹಿಸಬೇಕಾಗಿತ್ತೊ ಅದನ್ನು ತಯಾರು ಮಾಡಿ ಕಳುಹಿಸಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ವಿಶ್ವಬ್ಯಾಂಕಿನವರಿಂದ 12½ ಕೋಟಿ ರೂಪಾಯಿ ಕೇಳಿದ್ದೀರಲ್ಲಾ ಅವರು ಯಾವ ಆಧಾರದಮೇಲೆ ಕೊಡುತ್ತಾರೆ? ಏನು ಕಂಡೀಷನ್ಸ್ ಹಾಕಿದ್ದಾರೆ? ಆ ಕಂಡೀಷನ್ಸ್ ಏನೇನು ಎನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಅದರಲ್ಲಿ ಕಂಡೀಷನ್ಸ್ ಏನೂ ಇಲ್ಲ. ನ್ಯಾಷನರ್ ಶೈವೇ ಎನ್ನುವುದು ಯಾವರೀತಿ ರಾಜ್ಯದಲ್ಲಿ ನಡೆಯುತ್ತಾ ಇದೆ, ಅದರ ಅಡ್ಮಿನಿಸ್ಟ್ರೇಷನ್‌ಗೆ ಸ್ಪೆಷಲ್ ಆಗಿ ಒಬ್ಬ ಚೀಫ್ ಇಂಜನೀಯರ್ ಇದ್ದಾರೆಯೇ ಆ ಚೀಫ್ ಇಂಜನೀಯರ್ ಇವುಗಳನ್ನೆಲ್ಲಾ ವಿಚಾರ ಮಾಡುತ್ತಾರೆಯೇ ಇದಕ್ಕೆ ಎಷ್ಟು ಹಣ ಬೇಕಾಗುತ್ತದೆ, ಮತ್ತು ಅದರಲ್ಲಿ ವಾಹನಗಳು ಎಷ್ಟು ಓಡಾಡುತ್ತಾ ಇವೆ, ಇದಕ್ಕೆ ಹೆಚ್ಚು ಪ್ರಿಯಾರಿಟಿ ಕೊಡಬೇಕಾದ ಅವಶ್ಯಕತೆ ಇದೆಯೇ ಇದನ್ನೆಲ್ಲಾ ಪರಿಶೀಲನೆ ಮಾಡುತ್ತಾರೆ.

ಶ್ರೀ ಹೆಚ್. ಸಿದ್ದವೀರಪ್ಪ.—ಸ್ವಾಮಿ, ಹರಿಹರ, ದಾವಣಗೆರೆಯಲ್ಲಿ ಊರಿನ ಹೊರಗಡೆ ಹಾದು ಹೋಗುವ ರಸ್ತೆಗಳನ್ನು ಮಾಡುತ್ತಾ ಇದ್ದೇವೆ ಎಂದು ಹೇಳಿದಿರಿ. ನುಮಾರು 6-7 ವರ್ಷದಿಂದಲೂ ತುಂಗಭದ್ರಾ ನದಿಗೆ ಅಡ್ಡ ಹಾಕಿರುವಂಥ ಸೇತುವೆಯ ಕೆಲಸವನ್ನು ನೀವು ಒಬ್ಬ ಖರಾಬು ಕಂಟ್ರಾಕ್ಟರಿಗೆ ಕೊಟ್ಟಿರುವುದರಿಂದ ಆ ಕೆಲಸ ಯಾವ ಪ್ರಮಾಣದಲ್ಲಿ ಆಗಬೇಕಾಗಿತ್ತೊ ಅದು ಆಗದೆ ತಡವಾಗುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಕೆ. ಲಕ್ಕಪ್ಪ.—ನಾನು ಸ್ವಾಟ್‌ಗೆ ಹೋಗಿ ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ಮೊದಲು ಆ ಸೇತುವೆಯ ಕೆಲಸ ನಿಧಾನವಾಗಿತ್ತು, ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇತ್ತೀಚೆಗೆ ಅದು ಭರದಿಂದ ಕೆಲಸ ನಡೆಯುತ್ತಾ ಇದೆ. ಇದಕ್ಕೆ 2-3 ಸ್ಪ್ಯಾನ್‌ಗಳು ಬೇಕಾಗಿವೆ. ಅದರ ಫೌಂಡೇಷನ್ ಕೂಡ ಆಗಿದೆ. ಅದನ್ನು ಅದಷ್ಟು ಜಾಗ್ರತೆ ಮಾಡುತ್ತಾರೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಎನ್. ಹುಚ್ಚಮಾಸಿಗೌಡ.—ಸ್ವಾಮಿ, ಕೇಂದ್ರ ಸರ್ಕಾರದವರು ರಸ್ತೆಗಳಿಗೆ ಕೂಡ ತಕ್ಕಂಥ ಹಣ ಪೂರ್ಣವಾಗಿ ರಸ್ತೆಗಳಿಗೆ ಖರ್ಚಾಗಲಿಲ್ಲ ಎನ್ನುವ ಅಕ್ಷೇಪಣೆ ಇದೆ. ಅದರಲ್ಲಿ ಸತ್ಯಾಂಶ ಇದೆಯೇ ಏನು ಎಂದು ತಿಳಿಸುತ್ತೀರಾ?

ಶ್ರೀ ಕೆ. ಲಕ್ಕಪ್ಪ.—ಅದರಲ್ಲಿ ಸತ್ಯಾಂಶ ಏನೂ ಇಲ್ಲ.

Bazaar tax collected and credited to Tumminakatte Panchayat Fund

17. Sri N. L. BELLAD (Ranibennur).—

Will the Minister for Development be pleased to state :—

(*a*) whether bazaar tax collected by the Tumminakatte Panchayat Committee since 1966 has been credited to the Panchayat fund ;

(*b*) the amount of bazaar tax collected and credited to the Panchayat fund every year from 1961 to end of March 1969 ;

(*c*) if the bazaar tax has not been credited to the Panchayat fund, the action taken against the concerned officials ;

(*d*) whether investigation will be made through Vigilance Commission regarding misappropriation of money in the said Panchayat since 1964 and the report published ?

Sri B. L. GOWDA (Deputy Minister for Co-operation).—

(*a*) Yes.

(*b*) *Vide* Statement appended.

(*c*) If the non-crediting of the amount is noticed after a thorough investigation of the accounts, action will be taken against the concerned persons.

(*d*) If misappropriation of collected amount is noticed after the auditing of accounts of the Panchayat from 1961, suitable action will be taken.

STATEMENT

Year	*Amount collected and Credited.*
	Rs.
1961-62	1,078.00
1962-63	737.00
1963-64	1,282.00
1964-65	1,445.00
1965-66	1,385.00
1966-67	144.00
1967-68	700.00
1968-69	46.00
Total ...	6,817.00

ಶ್ರೀ ಎನ್. ಎಲ್. ಬೆಲ್ಲದ.—ಸ್ವಾಮಿ, ನಾನು ಕೇಳಿರತಕ್ಕಂಥ (ಇ) ಮತ್ತು (ಈ) ಪ್ರಶ್ನೆಗೆ ಉತ್ತರ ಕೊಟ್ಟಿರುವುದು ಒಂದಕ್ಕೊಂದಕ್ಕೆ ಹೊಂದಾಣಿಕೆ ಬರುವುದಿಲ್ಲ ಎಂದು ಕಂಡುಬರುತ್ತದೆ. ಈ ಎರಡಕ್ಕೂ ಸರಿಯಾಗಿ ತಾಳೆ ಬರುವುದಿಲ್ಲ ಎಂದು ಒಪ್ಪಿಕೊಳ್ಳುತ್ತೀರಾ?

† ಶ್ರೀ ಬಿ. ಎಲ್. ಗೌಡ.—ಈಗ ರಶೀತಿ ಪುಸ್ತಕಗಳು ಕೆಲವು ಕಳೆದುಹೋಗಿವೆ. ಕಳದು ಹೋಗಿರುವುದನ್ನು ಹುಡುಕಬೇಕು. ಯಾವ ರಶೀತಿ ಇದೆಯೋ ಅವರ ದುಡ್ಡು ಜಮಾ ಆಗಿದೆ. ಕಳೆದು ಹೋಗಿರುವ ಪುಸ್ತಕಗಳನ್ನು ಹುಡುಕಬೇಕು, ತನಿಖೆಯಾಗಬೇಕು ಎಂದು ಆರ್ಡರ್ ಮಾಡಿದ್ದೇವೆ. ಅದು ಗೊತ್ತಾದಮೇಲೆ ಎಷ್ಟು ಪೊಲಗು ಬಂದಿದೆ ಎಂದು ನೋಡಿ ಜಮಾ ಮಾಡುತ್ತಾರೆ.

ಶ್ರೀ ತಮ್ಮಯ್ಯ.—ರಶೀದಿ ಬುಕ್ಕುಗಳು ಕಳೆದು ಹೋಗಿದೆ ಎಂದು ಸರಕಾರ ಹೇಳುತ್ತಿರುವುದರಿಂದ ಅವರ ಮೇಲೆ ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಬಿ. ಎಲ್. ಗೌಡ.—ಇನ್ನೂ ನಾವು ತನಿಖೆ ಮಾಡುತ್ತಿದ್ದೇವೆ.

Sri H. N. NANJE GOWDA.—May I know whether any responsibility has been fixed on any officer regarding the missing of these receipt books?

Sri B. L. GOWDA.—An enquiry is being held. After the enquiry is over responsibility can be fixed.

ಶ್ರೀ ಎನ್. ಎಲ್. ಬೆಲ್ಲದ.—ಪಂಚಾಯತಿ ಆಡಿಟ್ ಮಾಡುವಾಗ 1959 ನೇ ಇಸವಿಯಿಂದ 1965ರ ವರೆಗೆ ಮಾಡಿರುವ ತನಿಖೆಯಲ್ಲಿ ನರಕಾರಕ್ಕೆ ಅವರು ತಮ್ಮ ಅಬ್‌ಜಕ್ಷನ್‌ಗಳನ್ನು ಕಳುಹಿಸಿ ಕೊಟ್ಟಿದ್ದಾರೆ. ಅವರೇ ಹೇಳಿರುವಂತೆ 1967ನೇ ಇಸವಿಯಲ್ಲಿ ಪಂಚಾಯತಿಯವರಿಂದ 9762 ರೂಪಾಯಿಗಳು ವಸೂಲಿ ಆಗಿದೆ ಆ ನಂತರ 21,333 ರಿಕವರೀ ಆಗಿವೆ ಮತ್ತು 9,000 ರೂಪಾಯಿ ಗಳು ಇನ್ನೂ ಅಬ್‌ಜಕ್ಷನ್ ಸ್ಟೇಜಿನಲ್ಲಿದೆ ಎಂದು ಇದೆ. ಆದರೆ ಇಲ್ಲಿ ತಾವು ಉತ್ತರ ಕೊಡುವುದನ್ನು ನೋಡಿದರೆ ಒಂದಕ್ಕೊಂದು ವಿರುದ್ಧವಾಗುತ್ತದೆ. ಇಲ್ಲಿ ತಾವು ಸುಮ್ಮನೆ ತನಿಖೆ ಮಾಡುತ್ತೇವೆ ಎಂದು ಹೇಳುತ್ತೀರಿ? ಇದರಲ್ಲಿ ಯಾವುದು ಸರಿ ಎಂದು ನಾವು ನಂಬಬೇಕು?

ಶ್ರೀ ಬಿ. ಎಲ್. ಗೌಡ.—ಡೀಜೇಲ್ಡ್ ಎನ್‌ಕ್ವೈರಿ ಮಾಡುತ್ತಿರುವಾಗ ರಶೀದಿ ಬುಕ್ಕುಗಳು ಕಳೆದುಹೋಗಿವೆ ಎನ್ನುವುದು ತಿಳಿದುಬಂದಿದೆ. ಇದರ ಬಗ್ಗೆ ತನಿಖೆ ಮಾಡಿ ಇದಕ್ಕೆ ಕಾರಣರು ಯಾರು ಎನ್ನುವುದನ್ನು ನೋಡಿ ಅವರಮೇಲೆ ಜವಾಬುದಾರಿ ಹೊರಿಸಬೇಕಾಗುತ್ತದೆ.

Fixing of crest gates for the Spill-Way of Gayathri Reservoir

24. Sri B. N. RAME GOWDA (Sira).—

Will the Minister of State for Minor Irrigation be pleased to state.—

(*a*) whether an estimate for fixing up the crest gates for the spill-way in order to increase the capacity of Gayathri Reservoir has been prepared;

(*b*) if so, the estimated cost;

(*c*) whether any representations were made to the Minister of State for Minor Irrigation to increase the capacity of the said Reservoir;

(*d*) whether there is any proposal to sanction this estimate in the interest of the Ayakat area which is 5,800 acres.

(*e*) the extent of additional quantity of water that could be impounded by fixing the crest gates for the spillway?

Sri VEERENDRA PATIL (Chief Minister).—

(*a*) No.

(*b*) Does not arise in view of reply to clause (*a*).

(*c*) Yes.

(*d*) It is proposed to gauge the inflows for some years to assess the surplus yield available, before taking any decision in the matter.

(*e*) Does not arise in view of reply to clause (*a*).

ಶ್ರೀ ಬಿ. ಎನ್. ರಾಮೇಗೌಡ.—ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಎಂದರೆ ಇದರಲ್ಲಿ ಹೆಚ್ಚು ನೀರು ಸಿಗುವುದಿಲ್ಲ ಎಂದು ಈ ರೀತಿ ಮಾಡಲಾಗಿದೆಯೇ?

† ಶ್ರೀ ವೀರೇಂದ್ರ ಪಾಟೀಲ್.—ಇದನ್ನು ಸರ್ವೇ ಮಾಡುವ ಕಾಲದಲ್ಲಿ ಈ ಕೆರೆಯಲ್ಲಿ ಸಾಕಷ್ಟು ಹೆಚ್ಚು ನೀರು ಶೇಖರಣೆಯಾಗುತ್ತದೆ ಎಂದು ತಿಳಿದು ಬಂತು. ಇದನ್ನು ಸರಿಯಾಗಿ ಪರಿಶೀಲನೆ ಮಾಡಬೇಕೆಂದು ಇಲ್ಲಿನ ಇಂಜನೀಯರುಗಳಿಗೆ ಸೂಚನೆ ಕೊಡಲಾಗಿದೆ. ಅವರ ವರದಿ ಬಂದನಂತರ ಇದನ್ನು ಪರಿಶೀಲನೆ ಮಾಡಬೇಕಾಗುತ್ತದೆ. ನಾನು 2-8-1968ರಲ್ಲಿ ಈ ಕೆರೆ